ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯಂ ಬಾಡಿಗೆಯ ಬಗ್ಗೆ

೭೦೦. ಶ್ರೀ ರಾಜುಗೌಡ (ಹನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರೇಷ್ಮೆ, ಪಶಂ ಸಂಗೋಪನಾ ಮತ್ತು ಮತ್ಸ್ಯೋದ್ಯಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರೇಷ್ಮೆ ಮಾರುಕಟ್ಟೆಮಂಡಲಿಯವರಂ ದಾಸ್ತಾನು ಮಳಿಗೆಯೊಂದನ್ನು ಬಾಡಿಗೆಗೆ ತೆಗೆದುಕೊಂಡಿರುವುದು ನಿಜವೆ ? ಹಾಗಿದ್ದಲ್ಲಿ, ಯಾವಾಗ ಹಾಗೂ ಆದಕ್ಕೆ ನೀಡಲಾಗುತ್ತಿರುವ ಬಾಡಿಗೆಯಂ ಪೊತ್ತವೆಷ್ಟು ?

ಆ) ಇದರ ವಿಸ್ತೀರ್ಣ ಹಾಗೂ ಈ ದಾಸ್ತಾನು ಮಳಿಗೆಯ ಸಾಮರ್ಥ್ಯ ಎಷ್ಟು ?

ಇ) ಇದನ್ನು ಬಾಡಿಗೆಗೆ ತೆಗೆದುಕೊಳ್ಳುವುದರ ಔಚಿತ್ಯವೇನು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ ಪಶುಸಂಗೋಪನಾ ಮತ್ತು ಮತ್ಸ್ಯೋದ್ಯವಂ ಸಚಿವರು).—

ಅ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯವರು ಹಲವಾರು ದಾಸ್ತಾನಂ ಮಳಿಗೆಗಳನ್ನು ಬಾಡಿಗೆಗೆ ತೆಗೆದುಕೊಂಡಿರುವರು. ಶಾಸಕರ ಪ್ರಶ್ನೆಯಂ ನಿರ್ದಿಷ್ಟವಾದ ದಾಸ್ತಾನಂ ಮಳಿಗೆಗೆ ಸಂಬಂಧಿಸಿಲ್ಲವಾದ ಕಾರಣದಿಂದ ಉತ್ತರಿಸಲು ಸಾಧ್ಯವಿರುವುದಿಲ್ಲ. ನಿರ್ದಿಷ್ಟವಾದ ಮಂಳಿಗೆಯ ಬಗ್ಗೆ ತಿಳಿಸಿದರೆ ಮಾಹಿತಿಯನ್ನು ನೀಡಲಾಗುವುದು.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರೇಷ್ಮೆ ಗೂಡಿನ ಮಾರಾಟದ ಬಗ್ಗೆ

೭೮೮. ಶ್ರೀ ಜಿ. ರಾಜೂಗೌಡ (ಹನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರೇಷ್ಮೆ ಪಶಂ ಸಂಗೋಪನಾ ಹಾಗೂ ಮತ್ಸ್ಯೋದ್ಯಮ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕೊಳ್ಳೆಗಾಲದ ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ಹರಾಜಿನಲ್ಲಿ ಬಿಕರಿಯಾದ ರೇಷ್ಮೆಗೂಡುಗಳಿಗೆ ಆದೇ ದಿನ ಹಣ ದೊರೆಯುವುದಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ನ್ಯೂನ್ಯತೆಯು ಎಷ್ಟು ದಿನಗಳಿಂದ ನಡೆಯುತ್ತಿದೆ ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ ಪಶುಸಂಗೋಪನಾ ಮತ್ತು ಮತ್ಸ್ಯೋದ್ಯಮ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

೧೯೮೪-೮೫ರಲ್ಲಿ ಲಿಡ್‌ಕರ್‌ನಲ್ಲಿ ಸಂಭವಿಸಿದ ಬೆಂಕಿ ಅನಾಹುತದ ಬಗ್ಗೆ

೪. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ೧೯೮೪-೮೫ರಲ್ಲಿ ಲಿಡ್ಕರ್ ಸಂಸ್ಥೆಯಲ್ಲಿ ಸಂಭವಿಸಿದ ಬೆಂಕಿ ಅಕಸ್ಮಿಕದ ಬಗ್ಗೆ ತನಿಖೆ ಮಾಡಲು ಸಿ. ಒ. ಡಿ. ಗೆ ಒಪ್ಪಿಸಿದ್ದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಸಿ.ಒ ಡಿ.ಯಂವರು ವರದಿಯನ್ನು ಸಲ್ಲಿಸಿದ್ದಾರೆಯೇ ?

ಇ) ಸಲ್ಲಿಸಿದ್ದಲ್ಲಿ ವರದಿಯ ಬಗ್ಗೆ ಸರ್ಕಾರದವರು ಈವರೆಗೂ ಕ್ರಮಕೈಗೊಳ್ಳದಿರಲಂ ಕಾರಣವೇನು ?